15. ಹಬ್ಬಗಳಲ್ಲಿ, ರಜೆಗಳಲ್ಲಿ, ಜಾತ್ರೆಗಳು ಮತ್ತು ಜನದಟ್ಟನೆಯ ದಿನಗಳಲ್ಲಿ ಹೆಚ್ಚಿನ ಸಾರಿಗೆ ಅವಶ್ಯಕತೆಯನ್ನು ಪೂರೈಸಲು ಹೆಚ್ಚುವರಿ ಬಸ್ಸುಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.

16. ವಾಹನಗಳ ಅವಘಡಗಳು, ಅಪಘಾತ ಮುಂತಾದ ತುರ್ತು ಸಂದರ್ಭಗಳಲ್ಲಿ ಸಕಾಲಿಕ ಪರಿಹಾರ ಮತ್ತು ಸಂಪರ್ಕಕ್ಕಾಗಿ ಹಾಗೂ ಕಾರ್ಯಾಚರಣೆಯ ಮೇಲೆ ಗಮನವಿಡಲು ಬಸ್ಸು ನಿಲ್ದಾಣಗಳಲ್ಲಿ ಹಾಗೂ ವಿಭಾಗೀಯ ಕೇಂದ್ರ ಸ್ಥಳಗಳಲ್ಲಿ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಲಾಗಿದೆ.

17. ಬೆಂಗಳೂರು ನಗರದಲ್ಲಿ ಬೆಳಿಗ್ಗೆ ಮತ್ತು ಸಾಯಂಕಾಲದ ಜನದಟ್ಟಣೆ ಅವಧಿಯಲ್ಲಿ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ 'ಪೀಕ್ ಅವರ್ ವಿಶೇಷ' ಸೇವೆಗಳ ಕಾರ್ಯಾಚರಣೆ.

18. ಕಾರ್ಖಾನೆಗಳು ಮತ್ತು ಇತರೆ ಸಂಸ್ಥೆಗಳಿಗೆ ಗುತ್ತಿಗೆ ಆಧಾರದ ಮೇಲೆ ಸಾರಿಗೆಗಳನ್ನು ಒದಗಿಸುವ ಸೌಲಭ್ಯ ವಿಸ್ತರಿಸಲಾಗಿದೆ.

19. ಬೆಂಗಳೂರು ನಗರದಲ್ಲಿ ನಗರ ಸಾರಿಗೆಗಳ ಕಾರ್ಯಾಚರಣೆಯನ್ನು ಜಿ.ಐ.ಎಸ್. ಮತ್ತು ಜಿ.ಪಿ.ಎಸ್. ಮೂಲಕ ಗಮನವಿಡಲಾಗುತ್ತಿದೆ.

20. ಬೆಂಗಳೂರು ನಗರದಲ್ಲಿ ಬಸ್ಸುಗಳ ಸೇವೆಯನ್ನು ಹೆಚ್ಚಿಸಲು ಖಾಸಗಿಯವರಿಂದ ಬಸ್ಸುಗಳನ್ನು ಬಾಡಿಗೆ ಆಧಾರದ ಮೇಲೆ ಪಡೆಯಲಾಗಿದೆ. ಪ್ರಸ್ತುತ ಬಾಡಿಗೆ ಆಧಾರದ ಮೇಲೆ 108 ಬಸ್ಸುಗಳು ಕಾರ್ಯಚರಣೆಯಲ್ಲಿದ್ದು, ಸಧ್ಯದಲ್ಲೇ ಇನ್ನೂ 250 ಬಸ್ಸುಗಳನ್ನು ಬಾಡಿಗೆ ಆಧಾರದ ಮೇಲೆ ಪಡೆಯಲಾಗುವುದು.

21. ಬೆಂಗಳೂರು ನಗರದಲ್ಲಿ ಜಯನಗರ-ಶಿವಾಜಿನಗರ ಮಾರ್ಗದಲ್ಲಿ ಮುಡಿಪಾಗಿಟ್ಟಿರುವ ರಸ್ತೆಯಲ್ಲಿ ಹೆಚ್ಚಿನ ಸಾಮರ್ಥ್ಯದ ಮೆಟ್ರೋ ಬಸ್‌ಗಳ ಅಳವಡಿಕೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಸಾರ್ವಜನಿಕ ಪ್ರಯಾಣಿಕರಿಗೆ ಮತ್ತಷ್ಟು ಉತ್ತಮ ಸಾರಿಗೆ ಸೌಲಭ್ಯ ಒದಗಿಸಲು ಪ್ರಯತ್ನಿಸುತ್ತಿದೆ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಪ್ರಾಂಗಣದಲ್ಲಿ ರೈತರಿಗೆ ಕನಿಷ್ಟ ಬೆಂಬಲ ಬೆಲೆ

4828 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳೆಗಳ ಮೇಲೆ ಕುಸಿತದಿಂದ ಆಗಿರುವ ಸಮಸ್ಯೆ ಹಾಗೂ ರೈತರ ಸಂಕಷ್ಟ ಪರಿಸ್ಥಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಸಮಸ್ಯೆ ನಿವಾರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಇ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಪ್ರಾಂಗಣದಲ್ಲಿ ರೈತರ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ದೊರಕಲು ಸರ್ಕಾರ ಪ್ರಯತ್ನವನ್ನೇನಾದರೂ ಮಾಡಿದೆಯೇ?

ಈ) ರೈತರ ಸಲುವಾಗಿ 'ಆವರ್ತ ನಿಧಿ'ಯನ್ನು ಸ್ಥಾಪಿಸಲಾಗಿದೆಯೇ?

ಉ) ಹಾಗಿದ್ದಲ್ಲಿ, ಇದರ ವಿವರಗಳೇನು?

ಶ್ರೀ ಆರ್.ಬಿ. ತಿಮ್ಮಾಪೂರ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಹೌದು.

ಆ) ಈ ಸಮಸ್ಯೆ ನಿವಾರಿಸಲು ಕೃಷಿ ಮಾರಾಟ ಇಲಾಖೆಯು ಅಡಮಾನ ಸಾಲ ಯೋಜನೆ ಹಾಗೂ ಫ್ಲೋರ್ ಪ್ರೈಸ್ ಯೋಜನೆಗಳನ್ನು ಜಾರಿಗೆ ತಂದಿದೆ.

ಇ) ಹೌದು, ಕೃಷಿ ಮಾರಾಟ ಇಲಾಖೆಯು ಕೆಳಕಂಡ ಯೋಜನೆಗಳನ್ನು ಜಾರಿಗೆ ತಂದಿರುತ್ತದೆ.

1. ಸುಗ್ಗಿ ಕಾಲದಲ್ಲಿ ರೈತರು ತಮ್ಮ ಉತ್ಪನ್ನಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿ ಸಂಕಷ್ಟಕ್ಕೆ ಒಳಗಾಗುವುದನ್ನು ತಪ್ಪಿಸುವ ಉದ್ದೇಶದಿಂದ ಮಾರುಕಟ್ಟೆ ಸಮಿತಿಗಳಲ್ಲಿ ಕೃಷಿ ಉತ್ಪನ್ನಗಳ ಅಡಮಾನ ಸಾಲ ಯೋಜನೆ ಜಾರಿಗೆ ತಂದಿದೆ.

   ಈ ಯೋಜನೆಯಲ್ಲಿ 1999-2000ನೇ ಸಾಲಿನಲ್ಲಿ 424 ರೈತರಿಗೆ ರೂ. 163.11 ಲಕ್ಷ ಮುಂಗಡ ನೀಡಲಾಗಿದೆ.

2. ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳಿಗೆ ಬೆಲೆ ಕಡಿಮೆಯಾದಲ್ಲಿ ಅಂತಹ ಉತ್ಪನ್ನಗಳಿಗೆ ಬೆಲೆ ನಿಗದಿಪಡಿಸಿ ಖರೀದಿಸುವ ವ್ಯವಸ್ಥೆ ಮಾಡಲು ಫ್ಲೋರ್ ಪ್ರೈಸ್ ಯೋಜನೆಯನ್ನು ದಿನಾಂಕ 24-11-1999 ರಂದು ಸರ್ಕಾರ ರೂಪಿಸಿದೆ. ಪ್ರಾರಂಭದಲ್ಲಿ ಈ ಯೋಜನೆಯನ್ನು ಈರುಳ್ಳಿ ಹಾಗೂ ಆಲೂಗಡ್ಡೆ ಹುಟ್ಟುವಳಿಗೆ ಜಾರಿಗೆ ತರಲಾಗಿದೆ.

   1999-2000ನೇ ಸಾಲಿನಲ್ಲಿ ಈರುಳ್ಳಿ ಧಾರಣೆ ಕುಸಿತದ ಸಂದರ್ಭದಲ್ಲಿ ಪ್ರತಿ ಕ್ವಿಂಟಾಲ್‌ಗೆ ರೂ. 300-00ರಂತೆ ಬೆಂಬಲ ಬೆಲೆ ನಿಗದಿಪಡಿಸಿ 32041.15ಕ್ವಿಂಟಾಲ್ ಈರುಳ್ಳಿಯನ್ನು ರೂ. 1,05,71,446-00 ಮೊತ್ತದಲ್ಲಿ ಖರೀದಿಸಲಾಗಿದೆ.

ಈ) ಹೌದು.

ಉ) ಫ್ಲೋರ್ ಪ್ರೈಸ್ ಯೋಜನೆಯಡಿಯಲ್ಲಿ ರೂ. 20.00 ಕೋಟಿಗಳ ಆವರ್ತ ನಿಧಿ ಸ್ಥಾಪಿಸಲಾಗಿದೆ. ರಾಜ್ಯದಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಂದ ರೂ. 15.00 ಕೋಟಿವಂತಿಗೆ ಮತ್ತು ರಾಜ್ಯ ಸರ್ಕಾರದಿಂದ ರೂ. 5.00 ಕೋಟಿಗಳ ವಂತಿಗೆ ಒದಗಿಸಲು ಅವಕಾಶ ಕಲ್ಪಿಸಲಾಗಿದೆ. ಈ ಆವರ್ತ ನಿಧಿಯನ್ನು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ನಿರ್ವಹಿಸುತ್ತದೆ.